**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**8325/2022**

ಸಿ.ಡಬ್ಲ್ಯೂ –11 ಪಿ.ಡಬ್ಲ್ಯೂ -10

| | | |
|---|---|---|
| ಹೆಸರು | ಃ | ಆಕಾಶ |
| ತಂದೆಃಗಂಡ | ಃ | ಕ್ಷೇಮಲಿಂಗ |
| ವಯಸ್ಸು | ಃ | 26 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ24.08.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 9, 12, 13 ರವರ ಪರಿಚಯ ಇರುತ್ತದೆ. ಬೆಳಗ್ಗೆ ಧಾಬಾದ ಹತ್ತಿರ ಚಾಸಾ-10, 12 ರವರ ಜೊತೆ ಮಾತನಾಡುತ್ತ ನಿಂತಾಗ ಚಾಸಾ-1 ರವರು ಬಂದು ಭಗವಂತರಿಗೆ ಅಪಘಾತವಾಗಿದ್ದು ಎಂದು ತಿಳಿಸಿದ್ದು ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಭಗವಂತರವರು ಮೃತಪಟ್ಟಿದ್ದು ಅಪಘಾತ ಸ್ಥಳದಲ್ಲಿ ರಕ್ತ ಚೆಲ್ಲಿರುತ್ತದೆ. ಅಲ್ಲಿರುವ ಕ್ರೂಸರ ಬಳಿ ಚಾಲಕ ನೋಡಿದಾಗ ಯಾರು ಇರಲಿಲ್ಲ. ನಂತರ ನಾನು ಅಲ್ಲಿಂದ ಹೊರಟಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ ಭಗವಂತರವರಿಗೆತಲೆಗೆ ಗಾಯವಾಗಿ ರಸ್ತೆಯ ಮೇಲೆ ಬಿದ್ದಿದ್ದರು ಎಂದರೆ ಸರಿ. ನಾವು ಸದರಿ ಅಪಘಾತದ ಬಗ್ಗೆ ಚಾಸಾ-6 ರವರಿಗೆ ವಿಚಾರಿಸಿದಾಗ ಅವರು ಬೆಳಗ್ಗೆ 7.10 ಗಂಟೆಗೆ ಕುಶಪ್ಪನ ತಾಂಡಾದ ಬ್ರಿಡ್ಜ ಮುಂದೆ ಕ್ರೂಸರದವನು ಅತಿ ವೇಗವಾಗಿ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅಪಘಾತಪಡಿಸಿರುತ್ತಾನೆ ಎಂದು ತಿಳಿಸಿದರು ಎಂದರೆ ಸರಿ. ಕ್ರೂಸರ ಸಂಖ್ಯೆ ಕೆಎ-48/ಎಎ0521 ಇರುತ್ತದೆ ಎಂದರೆ ಸರಿ. ಚಾಲಕನ ಹೆಸರು ಕುಶಪ್ಪ ಇರುತ್ತದೆ ಎಂದರೆ ಸರಿಯಲ್ಲ. ನಾನು ಈ ರೀತಿ ಪೋಲಿಸರ ಎದುರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ.ಎಸ.ಸಿ. ವಕೀಲರಿಂದಃ**

ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ಬಗ್ಗೆ ಚಾಸಾ-1 ರವರು ಹೇಳಿದಾಗ ಗೊತ್ತಾಗಿರುತ್ತದೆ ಎಂದರೆ ಸರಿ. ನಾನು ಬೆಳಗ್ಗೆ ಧಾಬಾದ ಹತ್ತಿರ ಚಾಸಾ-10, 12 ರವರ ಜೊತೆ ಮಾತನಾಡುತ್ತ ನಿಂತ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನನಗೆ ಚಾಸಾ-6 ರವರು ಆರೋಪಿಯು ಬೆಳಗ್ಗೆ 7.10 ಗಂಟೆಗೆ

ಕ್ರೂಸರನ್ನು ಅತಿ ವೇಗ ಹಾಗೂ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಅಪಘಾತಪಡಿಸಿರುತ್ತಾರೆ ಎಂದು ಹೇಳಿದಾಗ ಗೊತ್ತಾಗಿರುತ್ತದೆ ಎಂದರೆ ಸರಿ. ಚಾಸಾ-6 ರವರ ಮನೆ ಕಡಗಂಚಿಯ ರಸ್ತೆಯ ಭೀಮನಗರದಲ್ಲಿ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ನರೋಣಾದಲ್ಲಿರುವ ಜನರು ಕಡಗಂಚಿ ರಸ್ತೆಗೆ ವಾಕಿಂಗ ಹೋಗುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಬೋಧನ ರಸ್ತೆಗೆ ಹೋಗುತ್ತಾರೆ ಎಂದು ಹೇಳುತ್ತಾರೆ. ಚಾಸಾ-6 ರವರ ಹೊಲ ಭೋಧನ ರಸ್ತೆಗೆ ಇರುವುದಿಲ್ಲ ಎಂದರೆ ಸರಿ. ಅಪಘಾತವಾದ ಸ್ಥಳ ನರೋಣಾದಿಂದ ಸುಮಾರು 2 ಕಿ.ಮಿ. ಅಂತರದಲ್ಲಿ ಇದೆ. ನರೋಣಾದಿಂದ ಬೊದನ ರಸ್ತೆ ಕಚ್ಚಾರಸ್ತೆ ಇರುತ್ತದೆ ಎಂದರೆ ಸರಿ. ಕಚ್ಚಾ ರಸ್ತೆ ಇರುವುದರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ. ಚಾಸಾ-1 ರವರು ನನಗೆ ಪರಿಚಯ ಇದ್ದು ಒಂದೇ ಓಣಿಯವರು ಇರುತ್ತಾರೆ. ನಾನು ಮತ್ತು ಚಾಸಾ-1 ಒಂದೇ ಸಮಾಜದವರು ಎಂದರೆ ಸರಿ. ಇಂದು ಚಾಸಾ-1 ರವರು ಬಂದಿರುವುದಿಲ್ಲ. ನನಗೆ ಚಾಸಾ-1 ರವರು ನ್ಯಾಯಾಲಯಕ್ಕೆ ಹೋಗಿ ಸಾಕ್ಷಿ ಹೇಳು ಎಂದ ಕಾರಣ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ನಾನು ಪೋಲಿಸರಿಗೆ ನೀಡಿದ ಹೇಳಿಕೆಯನ್ನು ಅವರು ಬರೆದುಕೊಂಡಿರುತ್ತಾರೆ. ನಾನು ನರೋಣಾ ಪೋಲಿಸ ಠಾಣೆಯಲ್ಲಿ ಯಾವ ಸಮಯದಲ್ಲಿ ಹೇಳಿಕೆ ನೀಡಿದ್ದೇ ಎಂದು ನೆನಪಿಲ್ಲ. ನನ್ನ ಹೇಳಿಕೆಯನ್ನು ಮಾತ್ರ ತೆಗೆದುಕೊಂಡಿರುತ್ತಾರೆ. ಪೋಲಿಸರು ನನ್ನ ಹೇಳಿಕೆಯನ್ನು ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಬೆಳಗ್ಗೆ ಢಾಬಾದ ಹತ್ತಿರ ಚಾಸಾ-10, 12 ರವರ ಜೊತೆ ಮಾತನಾಡುತ್ತ ನಿಂತಾಗ ಚಾಸಾ-1 ರವರು ಬಂದು ಭಗವಂತರಿಗೆ ಅಪಘಾತವಾಗಿದ್ದು ಎಂದು ತಿಳಿಸಿದ್ದು ನಾವು ಸ್ಥಳಕ್ಕೆ ಹೋಗಿ ನೋಡಲಾಗಿ ಭಗವಂತರವರು ಮೃತಪಟ್ಟಿದ್ದು ಅಪಘಾತ ಸ್ಥಳದಲ್ಲಿ ರಕ್ತ ಚೆಲ್ಲಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿರುವ ಕ್ರೂಸರ ಬಳಿ ಚಾಲಕ ನೋಡಿದಾಗ ಯಾರು ಇರಲಿಲ್ಲ. ನಂತರ ನಾನು ಅಲ್ಲಿಂದ ಹೊರಟಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ ಭಗವಂತರವರಿಗೆತಲೆಗೆ ಗಾಯವಾಗಿ ರಸ್ತೆಯ ಮೇಲೆ ಬಿದ್ದಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸದರಿ ಅಪಘಾತದ ಬಗ್ಗೆ ಚಾಸಾ-6 ರವರಿಗೆ ವಿಚಾರಿಸಿದಾಗ ಅವರು ಬೆಳಗ್ಗೆ 7.10 ಗಂಟೆಗೆ ಕುಶಪ್ಪನ ತಾಂಡಾದ ಬ್ರಿಡ್ಜ ಮುಂದೆ ಕ್ರೂಸರದವನು ಅತಿ ವೇಗವಾಗಿ ನಿಶ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಅಪಘಾತಪಡಿಸಿರುತ್ತಾನೆ ಎಂದು ತಿಳಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರೂಸರ ಸಂಖ್ಯೆ ಕೆಎ-48/ಎಎಂ0521 ಇರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲಕನ ಹೆಸರು ಕುಶಪ್ಪ ಇರುತ್ತದೆ ಎಂದರೆ ಸರಿಯಲ್ಲ. ನಾನು ಈ ರೀತಿ ಪೋಲಿಸರ ಎದುರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.